# ನಿರ್ಮಾಲ್ಯತೀರ್ಥ ಮತ್ತು ಗೋಪೀಚಂದನ

ಶ್ರೀ ಜಯತೀರ್ಥರವರು ಗೋಪೀಚಂದನಧಾರಣೆಯ ಕುರಿತು ಒಂದು ಮಹತ್ತ್ವದ ಪ್ರಶ್ನೆಯನ್ನು ಕೇಳಿದ್ದಾರೆ.

**ಸ್ನಾನ ಮಾಡಿದ ನಂತರ ಮೊದಲು ಮುದ್ರೆ ಹಚ್ಚಿಕೊಳ್ಳುವದು ಬಹಳ ವರ್ಷಗಳ ಅಭ್ಯಾಸ. ನಿರ್ಮಾಲ್ಯದಿಂದಲೇ ಹಚ್ಚಿಕೊಳ್ಳಬೇಕೆಂದು ಈಚೆಗೆ ಓದಿದೆ, ಹಾಗೂ ಕೇಳಿದೆ. ದೀಪ ಹಚ್ಚಿ ದೇವರನ್ನು ತೆಗೆದಿಟ್ಟುಕೊಂಡು ನಿರ್ಮಾಲ್ಯ ಮಾಡುವವರೆಗೆ ಮುದ್ರೆ ಇರುವದಿಲ್ಲ. ಉಪನಯದ ಆದಾಗ ನನಗೆ ಹೇಳಿಕೊಟ್ಟಿದ್ದು ಮುದ್ರೆ ಇಲ್ಲದೆ ಇರಲೇ ಬಾರದು ಎಂದು. Please Clarify**

ಉತ್ತರ ಹೀಗಿದೆ —

ದೇವರ ನಿರ್ಮಾಲ್ಯದಿಂದ ಗೋಪೀಚಂದನವನ್ನು ಹಚ್ಚಿಕೊಳ್ಳಬೇಕು ಎನ್ನುವದರಲ್ಲಿ ವಿವಾದವಿಲ್ಲ. ಆದರೆ, ಯಾವಾಗಲೂ ಅಲ್ಲ.

ವಸ್ತುತಃ ಶಾಸ್ತ್ರ ವಿಧಿಸುವ ಕ್ರಮ ಹೀಗಿದೆ —

ಬೆಳಗಿನ ಜಾವದಲ್ಲಿಯೇ ಸ್ನಾನ. ಸಂಧ್ಯಾವಂದನೆ ಮತ್ತು ನಿರ್ಮಾಲ್ಯವಿಸರ್ಜನೆ[1]. ಇಷ್ಟು ಕಾರ್ಯ ಸೂರ್ಯೋದಯವಾಗುವದಕ್ಕಿಂತ ಮುಂಚೆಯೇ ಆಗಬೇಕು.

ಆ ಬಳಿಕ ದೇವರ ಪೂಜೆಗೆ ಕಲಶ ಮುಂತಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆ ನಂತರ ತುಳಸಿಯನ್ನು ಬಿಡಿಸಿ ಮಧ್ಯಾಹ್ನದವರೆಗೆ ಶಾಸ್ತ್ರದ ಅಧ್ಯಯನ ಅಧ್ಯಾಪನಗಳನ್ನು ಮುಂದುವರೆಸಿ ಮಧ್ಯಾಹ್ನಕಾಲದಲ್ಲಿ ದೇವರಪೂಜೆಗಾಗಿ ಸ್ನಾನವನ್ನು ಮಾಡಬೇಕು. ಆಗ ಸ್ನಾನ ಮುಗಿದ ತಕ್ಷಣ ನೀರಿನಲ್ಲಿಯೇ ಊರ್ಧ್ವಪುಂಡ್ರಗಳನ್ನು ಧರಿಸಿ ದೇವರ ಮನೆಗೆ ಬಂದು ನಿರ್ಮಾಲ್ಯಾಭಿಷೇಕವನ್ನು

---

[1] ನಿರ್ಮಾಲ್ಯದ ಅಭಿಷೇಕ ಅಲ್ಲ. ಸಂಪುಟಗಳನ್ನು ತೆಗೆದು ಅದರಲ್ಲಿರುವ ಹಿಂದಿನ ದಿವಸದ ನಿರ್ಮಾಲ್ಯ ತುಳಸೀಪುಷ್ಪಗಳನ್ನು ತೆಗೆದಿಡುವದು ನಿರ್ಮಾಲ್ಯವಿಸರ್ಜನೆ.

ಮಾಡಬೇಕು. ಆ ನಿರ್ಮಾಲ್ಯಾಭಿಷೇಕದಿಂದಲೇ ಗೋಪೀಚಂದನವನ್ನು ಹಚ್ಚಿಕೊಳ್ಳಬೇಕು.

ಬೆಳಗಿನ ಜಾವದ ಆಹ್ನಿಕ ಮಾಡುವಾಗ ಇನ್ನೂ ನಿರ್ಮಾಲ್ಯ ಅಭಿಷೇಕವೇ ಆಗಿರುವದಿಲ್ಲ. ಆದರೆ ಊರ್ಧ್ವಪುಂಡ್ರಗಳಿಲ್ಲದೇ ಮಾಡುವ ಎಲ್ಲ ಕರ್ಮಗಳೂ ನಿಷ್ಫಲ. ನಿರ್ಮಾಲ್ಯ ಅಭಿಷೇಕದ ವಿಧಿ ಇರುವದೇ ಮಧ್ಯಾಹ್ನಕಾಲದಲ್ಲಿ[2]. ಹೀಗಾಗಿ ಮಧ್ಯಾಹ್ನದವರೆಗಿನ ಸಂಧ್ಯಾವಂದನೆ, ನಿರ್ಮಾಲ್ಯವಿಸರ್ಜನೆ, ದೇವರಪೂಜೆಯ ಸಿದ್ಧತೆ, ತುಳಸೀಚಯನ, ಮುಖ್ಯವಾಗಿ ಶಾಸ್ತ್ರದ ಅಧ್ಯಯನ ಅಧ್ಯಾಪನಗಳನ್ನು ಗೋಪೀಚಂದನವಿಲ್ಲದೇ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅವಶ್ಯವಾಗಿ ಗೋಪೀಚಂದನವನ್ನು ಹಚ್ಚಿಕೊಳ್ಳಲೇ ಬೇಕು. ಸದಾಚಾರ ಸ್ಮೃತಿಗೆ ವ್ಯಾಖ್ಯಾನ ರಚಿಸಿರುವ ಎಲ್ಲ ಮಹಾನುಭಾವರೂ ಸಹ ಗೋಪೀಚಂದನ ಧಾರಣೆಯನ್ನು ಮೊದಲಿಗೆ ತಿಳಿಸಿ ಆ ಬಳಿಕ ಸಂಧ್ಯಾವಂದನೆಯನ್ನು ಹೇಳಿದ್ದಾರೆ.

---

[2] ಶ್ರೀಮದಾಚಾರ್ಯರೂ ಹೀಗೇ ಮಾಡಿ ತೋರಿಸಿದ್ದಾರೆ ಎನ್ನುವದನ್ನು ಮುಂದೆ ತಿಳಿಸುತ್ತೇನೆ

ಮಧ್ಯಾಹ್ನಕಾಲದಲ್ಲಿ ದೇವರ ಪೂಜೆಗಾಗಿ ಸ್ನಾನ ಮಾಡಿ, ಸ್ನಾನ ಮುಗಿಯುತ್ತಿದ್ದಂತೆ ನೀರಿನಲ್ಲಿಯೇ ಗೋಪೀಚಂದನವನ್ನು ಹಚ್ಚಿಕೊಂಡು, ಸ್ನಾನಕರ್ಮವನ್ನು ಶ್ರೀಹರಿಗೆ ಸಮರ್ಪಿಸಿ ದೇವರ ಮನೆಗೆ ಬಂದು ದೇವರ ದೀಪವನ್ನು ಹಚ್ಚಿ ನಿರ್ಮಾಲ್ಯಾಭಿಷೇಕವನ್ನು ಮಾಡಬೇಕು[3].

ಆ ನಿರ್ಮಾಲ್ಯಾಭಿಷೇಕವನ್ನು ಸ್ವೀಕರಿಸಿ, ಆದರದಿಂದ ಎಡಗೈಗೆ ಹಾಕಿಕೊಂಡು ಗೋಪಿಚಂದನವನ್ನು ತೇದು ಊರ್ಧ್ವಪುಂಢ್ರ ಮುದ್ರೆಗಳನ್ನು ಧಾರಣೆ ಮಾಡಿ ಕಲಶಪೂಜೆ ಶಂಖಪೂಜೆ ಷೋಡಶೋಪಚಾರ ಪೂಜೆಗಳನ್ನು ಮಾಡಬೇಕು.

ಇದು ಶುದ್ಧವಾದ ಸಂಪ್ರದಾಯ. ಹೀಗಾಗಿ ಬೆಳಗಿನ ಜಾವದಲ್ಲಿ ನಿರ್ಮಾಲ್ಯಾಭಿಷೇಕವೇ ಆಗಿರುವದಲ್ಲವಾದ್ದರಿಂದ ಅಗ ನಿರ್ಮಾಲ್ಯದಿಂದ ಗೋಪಿಚಂದನ ಹಚ್ಚಿಕೊಳ್ಳುವ ಪ್ರಸಕ್ತಿ ಬರುವದಿಲ್ಲ.

---

[3] ಸಿದ್ಧತೆಗಳೆಲ್ಲವೂ ಪ್ರಾತಃ ಕಾಲದಲ್ಲಿಯೇ ಮುಗಿದಿರುತ್ತದೆಯಾದ್ದರಿಂದ ಮತ್ತೆ ಸಿದ್ಧತೆಯ ಪ್ರಶ್ನೆ ಬರುವದಿಲ್ಲ.

ಇನ್ನು ಈ ದಿವಸಗಳಲ್ಲಿ ಹೀಗೆ ಎರಡು ಸ್ನಾನಗಳನ್ನು ಮಾಡುವ ಪದ್ಧತಿ ಬಹುತೇಕ ನಿಂತು ಹೋಗಿದೆ. ಈಗ ಹೇಗೆ ಮಾಡಬೇಕು ಎಂಬ ಪ್ರಶ್ನೆ.

ಇಂಥಹ ಸಂದರ್ಭಗಳಲ್ಲಿ ನಿರ್ಮಾಲ್ಯ ತೀರ್ಥವಿಲ್ಲದೇ ಗೋಪಿಚಂದವನ್ನು ಹಚ್ಚಿರ್ಕೊಳ್ಳಬೇಕು. ಕಾರಣ, ಸಂಧ್ಯಾವಂದನೆ, ನಿರ್ಮಾಲ್ಯವಿಸರ್ಜನೆ, ದೇವತೆಗಳಿಗೆ ಅಭಿಷೇಕ, ಗುರುಗಳಿಗೆ ಅಭಿಷೇಕ ಇವೆಲ್ಲವನ್ನೂ ಗೋಪೀಚಂದನವಿಲ್ಲದೇ ಮಾಡುವ ಪ್ರಸಕ್ತಿ ಬರುತ್ತದೆ. ಹಾಗೆ ಮಾಡುವದು ತಪ್ಪು, ಆದ್ದರಿಂದ ಮೊದಲಿಗೆ ಗೋಪೀಚಂದನವನ್ನು ಹಚ್ಚಿಕೊಂಡು ಅ ನಂತರ ಈ ಮಹಾಸತ್ಕರ್ಮಗಳನ್ನು ಮಾಡಬೇಕು. ನಿರ್ಮಾಲ್ಯದಿಂದಲೇ ಹಚ್ಚಿಕೊಳ್ಳುವ ಅಪೇಕ್ಷೆ ಇದ್ದಲ್ಲಿ ಮೇಲೆ ತಿಳಿಸಿದ ಪ್ರಾಚೀನ ಶುದ್ಧ ಸಂಪ್ರದಾಯವನ್ನು ಅನುಸರಿಸಬೇಕು.

**ಅಥವಾ ಹಿಂದಿನ ದಿವಸದ ನಿರ್ಮಾಲ್ಯದಿಂದ ಗೋಪೀಚಂದನವನ್ನು ಹಚ್ಚಿಕೊಳ್ಳಬಹುದೇ ಎಂಬ ಪ್ರಶ್ನೆಯನ್ನು ನೀವು ಮಾಡಬಹುದು.**

ಹಿಂದಿನ ದಿವಸದ ನಿರ್ಮ್ಯಾಲ್ಯ ನಮಗೆ ಮಡಿಯಾದರೂ, ದೇವರ ಪೂಜೆಯ ಮಡಿಗೆ ಅದು ಬರುವದಿಲ್ಲ. ನಾವು ನಿರ್ಮಾಲ್ಯತೀರ್ಥದಿಂದ ಗೋಪೀ ಹಚ್ಚಿಕೊಂಡು ದೇವರಪೂಜೆ ಮಾಡಬೇಕು. ಹೀಗಾಗಿ ಹಿಂದಿನ ದಿವಸದ ನಿರ್ಮಾಲ್ಯದ ತೀರ್ಥದಿಂದ ಹಚ್ಚಿಕೊಳ್ಳಲು ಸಾಧ್ಯವಿಲ್ಲ.

ಮನೆಯಲ್ಲಿನ ಇತರ ಸದಸ್ಯರು ಅಂದರೆ, ಹೆಂಡತಿ ಮಕ್ಕಳು ಹಿಂದಿನ ದಿವಸದ ನಿರ್ಮಾಲ್ಯದಿಂದ ಗೋಪಿಯನ್ನು ಹಚ್ಚಿಕೊಳ್ಳಲು ಅಡ್ಡಿಯಿಲ್ಲ. ಮಡಿಯ ಕಾರ್ಯವಿದ್ದವರು ಮಾತ್ರ ಹಚ್ಚಿಕೊಳ್ಳಲಿಕ್ಕಾಗುವದಿಲ್ಲವಷ್ಟೆ.

ಶುದ್ಧವಾದ ಪ್ರಾಚೀನ ಸಂಪ್ರದಾಯವನ್ನು — ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಆಚರಿಸಿ ತೋರಿಸಿದ ಸಂಪ್ರದಾಯವನ್ನು — ಶ್ರೀ ನಾರಾಯಣಪಂಡಿತಾಚಾರ್ಯರು ತಮ್ಮ ಶ್ರೀ ಮಧ್ವವಿಜಯದ ಹದಿನಾಲ್ಕನೆಯ ಸರ್ಗದಲ್ಲಿ ತಿಳಿಸಿದ್ದಾರೆ.

ಶ್ರೀಮದಾಚಾರ್ಯರು ಪ್ರಶಸ್ತವಾದ ಅರುಣೋದಯಕಾಲಕ್ಕೇ ಸ್ನಾನಾದಿಗಳನ್ನು ಮುಗಿಸಿ ಯೋಗಾಸನಸ್ಥರಾಗಿ ಧ್ಯಾನಾಸಕ್ತರಾಗಿರುತ್ತಿದ್ದರು.

ಆಚಾರ್ಯರ ಸಂನ್ಯಾಸಿಶಿಷ್ಯರೂ ಸಹ ಸ್ನಾನ ಮುಗಿಸಿ ಗೋಪಿಚಂದನಾದಿಗಳನ್ನು ಧಾರಣ ಮಾಡಿ, ತರ್ಪಣಾದಿಗಳನ್ನು ಮುಗಿಸಿ, ಆಚಾರ್ಯರ ಸನ್ನಿಧಾನದಲ್ಲಿ ನಿರ್ಮಾಲ್ಯ ವಿಸರ್ಜನೆಯನ್ನು ಮಾಡುತ್ತಿದ್ದರು.

ಆ ಬಳಿಕ ಸೂರ್ಯೋದಯದ ಸಮಯಕ್ಕೆ ಆಚಾರ್ಯರು ಧ್ಯಾನವನ್ನು ಮುಗಿಸಿ, ಪಾಠ ಆರಂಭಿಸುತ್ತಿದ್ದರು. ಸೂರ್ಯ ಪಶ್ಚಿಮಕ್ಕೆ ಹೊರಳಿದ ಸಮಯಕ್ಕೆ ಅಂದರೆ ಮಧ್ಯಾಹ್ನ ಹನ್ನೆರಡು ಗಂಟೆಯ ನಂತರ ಆಚಾರ್ಯರು ದೇವರ ಪೂಜೆಗಾಗಿ ಸ್ನಾನಕ್ಕೇಳುತ್ತಿದ್ದರು.

ಸರೋವರದಲ್ಲಿ ಆಚಾರ್ಯರು ಸ್ನಾನ ಮಾಡಿ ಶುದ್ಧ ಒಣಗಿದ ವಸ್ತ್ರವನ್ನು ಉಡುವ ಸಮಯಕ್ಕೆ ಆಚಾರ್ಯರ ಶಿಷ್ಯರು ವ್ಯಾಸಮುಷ್ಟಿ ಸಾಲಗ್ರಾಮಗಳನ್ನು ಸರೋವರದ ಬಳಿಗೇ

ತರುತ್ತಿದ್ದರು. ಆಚಾರ್ಯರು ಅಲ್ಲಿಯೇ ನಿರ್ಮಾಲ್ಯಾಭಿಷೇಕವನ್ನು ಮಾಡಿ ನಿರ್ಮಾಲ್ಯತೀರ್ಥವನ್ನು ಸ್ವೀಕರಿಸಿ ಗೋಪೀಚಂದನ ಧಾರಣೆ ಮಾಡಿ ಮಠದ ಒಳಗೆ ಬಂದು ಪೂಜೆಯನ್ನು ಆರಂಭಿಸುತ್ತಿದ್ದರು[4].

ಹೀಗೆ, ಬೆಳಗಿನ ಜಾವದಲ್ಲಿ ನಿರ್ಮಾಲ್ಯತೀರ್ಥವಿಲ್ಲದೇ ಗೋಪೀಚಂದನದಿಂದ ಊರ್ಧ್ವಪುಂಢ್ರಧಾರಣೆ, ಮಧ್ಯಾಹ್ನ ನಿರ್ಮಾಲ್ಯತೀರ್ಥದಲ್ಲಿ ಗೋಪೀಚಂದನ ತೇದು ಧಾರಣೆ, ಸಂಜೆಯ ಸ್ನಾನ ಮಾಡುವದಿದ್ದರೇ ಅದೇ ನಿರ್ಮಾಲ್ಯತೀರ್ಥದಿಂದ ಧಾರಣೆ ಮಾಡಬಹುದು. ಇವತ್ತಿನ ಸಂದರ್ಭಗಳಲ್ಲಿ ಬೆಳಿಗ್ಗೆ ಮಧ್ಯಾಹ್ನದ ಸ್ನಾನಗಳು ಗೃಹಸ್ಥರಿಗೆ ಕಷ್ಟಸಾಧ್ಯವಾದ್ದರಿಂದ ಸ್ನಾನ ಮುಗಿಸಿದ ತಕ್ಷಣ ನೀರಿನಲ್ಲಿ ಧಾರಣೆ, ದೇವರ ಮನೆಗೆ ಬಂದು ಗೋಪೀಚಂದನ ಹಚ್ಚಿಕೊಂಡು, ಸಂಧ್ಯಾವಂದನೆ ಆ ನಂತರ ದೇವರ ಪೂಜೆಯನ್ನು ಮಾಡುವದು ಸೂಕ್ತ. ನಿರ್ಮಾಲ್ಯದಲ್ಲಿ

---

[4] ವಿಶ್ವನಂದಿನಿ ಮಾಲಿಕೆ ಮಧ್ವವಿಜಯದ ಉಪನ್ಯಾಸದ 14-02 ಮತ್ತು 14-05 ರಲ್ಲಿ ಈ ಘಟನೆಗಳನ್ನು ವಿಸ್ತಾರವಾಗಿ ತಿಳಿಸಿದ್ದೇನೆ. ಕೇಳಿ. VNU309 ಮತ್ತು VNU312

ಗೋಪಿಯನ್ನು ಹಚ್ಚಿಕೊಳ್ಳುವ ವಿಧಿಗಿಂತ ಊರ್ಧ್ವಪುಂಢ್ರಗಳಿಲ್ಲದೇ ಸತ್ಕರ್ಮವನ್ನು ಮಾಡಬಾರದು ಎನ್ನುವ ನಿಷೇಧ ಪ್ರಬಲವಾದ್ದರಿಂದ ಇವತ್ತಿನ ದಿವಸ ಗೋಪೀಚಂದನವನ್ನು ಹಚ್ಚಿಕೊಂಡೇ ಸತ್ಕರ್ಮಗಳನ್ನು ಮಾಡಬೇಕು. ಸಮಗ್ರ ದೇವರ ಪೂಜೆ ಮುಗಿದ ಬಳಿಕ ಗಂಧವನ್ನು ಹಚ್ಚಿಕೊಳ್ಳಬೇಕಾದರೆ ನಿರ್ಮಾಲ್ಯತೀರ್ಥವನ್ನು ಹಾಕಿಕೊಂಡು ಹಚ್ಚಿಕೊಂಡಲ್ಲಿ ನಿರ್ಮಾಲ್ಯತೀರ್ಥವನ್ನು ದೇಹದ ಮೇಲೆ ಧರಿಸುವ ಸೌಭಾಗ್ಯವೂ ತಪ್ಪುವದಿಲ್ಲ. ಭಾನುವಾರ, ರಜಾದಿನಗಳಲ್ಲಿ ಶ್ರೀಮದಾಚಾರ್ಯರು ತೋರಿಕೊಟ್ಟ ಶುದ್ಧ ಸಂಪ್ರದಾಯದಂತೆ ಬೆಳಗಿನ ಜಾವದ ಸ್ನಾನ, ಮಧ್ಯಾಹ್ನಸ್ನಾನಗಳನ್ನು ಮಾಡಿ ನಿರ್ಮಾಲ್ಯ ತೀರ್ಥದಿಂದಲೇ ಗೋಪಿಯನ್ನು ತೇದು ಊರ್ಧ್ವಪುಂಢ್ರ ಆಯುಧಗಳನ್ನು ಧಾರಣೆ ಮಾಡಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491